**ಸಾಕ್ಷಿಯನ್ನು ದಿಃ 04.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ದಿಃ 06.11.2012 ರಂದು ಆರೋಪಿ ಸಹ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿ. ಗಲಾಟೆಯಲ್ಲಿ ಆರೋಪಿಗೂ ಏಟಾಗಿತ್ತು ಎಂದರೆ ಸಾಕ್ಷಿ ಬಿದ್ದು ಏಟು ಮಾಡಿಕೊಂಡಿರುತ್ತಾರೆ. ನಾವು ಹಲ್ಲೆ ಮಾಡಿದ್ದರಿಂದಲೇ ಆರೋಪಿಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ನನಗೂ ಆರೋಪಿಗೂ ಸುಮಾರು 40 ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿ. ಚಾಸಾ-5 ರಿಂದ ಚಾಸಾ-8 ರವರ ನನ್ನ ಜೊತೆ ಚನ್ನಾಗಿದ್ದಾರೆ ಎಂದರೆ ಸರಿ. ಈ ಹಿಂದೆ ನನ್ನ ಮತ್ತು ಆರೋಪಿತರ ನಡುವೆ ಗಲಾಟೆ ನಡೆದು ಆರೋಪಿ ನನ್ನ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ.

ನನ್ನ ಮತ್ತು ಆರೋಪಿಯ ನಡುವೆ ಸಿವಿಲ್ ದಾವೆ ಇತ್ತು ಎಂದರೆ ಸರಿ. ಸದರಿ ದಾವೆ ದಿಃ 04.03.1978 ರಲ್ಲಿ ರಾಜಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಈಗ ವಾಸವಿರುವ ಮನೆ ಇತ್ತು ಎಂದರೆ ಸರಿ. ಈ ನ್ಯಾಯಾಲಯದಲ್ಲಿ ಎಫ್ ಡಿ ಪಿ ಸಂಖ್ಯೆ 16/2018 ರಂತೆ ವಿಚಾರಣೆಯಲ್ಲಿದೆ ಎಂದರೆ ಸರಿ. ನಿಪಿ-1 ರಲ್ಲಿ ಮನೆ ರಿಪೇರಿ ಬಗ್ಗೆ ನಮೂದಿಸಿಲ್ಲ. ನನ್ನ ಮತ್ತು ಆರೋಪಿಯ ಮನೆ ರಸ್ತೆಯ ಅಕ್ಕ ಪಕ್ಕ ಇದೆ ಎಂದರೆ ಸರಿ. ನಮ್ಮ ಮನೆ ಇರುವ ಜಾಗದಲ್ಲಿ ಹೆಚ್ಚು ಜನ ಓಡಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಸ್ ನಿಲ್ದಾಣ ಇದೆ ಎಂದರೆ ಸರಿ. ಗಲಾಟೆ ನಡೆಯುವ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ಗಲಾಟೆ ಅರ್ಧ ಗಂಟೆ ನಡೆದಿರುತ್ತದೆ. ಗಲಾಟೆಯಾದ ನಂತರ ನಾನು ತಕ್ಷಣ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಆಸ್ಪತ್ರೆಗೆ ಯಾವ

ಸಮಯಕ್ಕೆ ಬಂದಿರುತ್ತೇನೆ ಮತ್ತು ಎಷ್ಟು ಹೊತ್ತು ಇದ್ದೆ ಎಂದು ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಬಟ್ಟೆ ಸಹ ರಕ್ತಮಯವಾಗಿತ್ತು. ಸದರಿ ಬಟ್ಟೆಯನ್ನು ಪೋಲೀಸರಿಗೆ ನೀಡಿಲ್ಲ. ಮು ಮಾ 1 ರ ಚಾಕು ಎಲ್ಲಾ ಕಡೆ ದೊರೆಯುತ್ತವೆ ಎಂದರೆ ಸರಿ. ಮು ಮಾ –1 ಕ್ಕೆ ವಿಶೇಷ ಗುರುತು ಇಟ್ಟುಕೊಂಡಿಲ್ಲ. ಆದರೆ ಇದೇ ಚಾಕು ಆಗಿದೆ. ನಾನೇ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಆರೋಪಿಯ ಮೇಲೆ ಜಗಳ ತೆಗೆದಿರುತ್ತೇನೆ, ನಿರಂತರವಾಗಿ ಆರೋಪಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅ ದಿನ ನಾನು ಆರೋಪಿಯ ಮೆಲೇ ಜಗಳ ತೆಗೆದು ಹಲ್ಲೆ ಮಾಡಿದ್ದರಿಂದ ಆರೋಪಿ ನನ್ನ ಮೇಲೆ ದೂರು ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನೀಡಿರುವ ದೂರಿಗೆ ಪ್ರತೀಕಾರವಾಗಿ ಈ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**